ವಿಶ್ಲೇಷಿಸಿ ಈ ಚಾಕಲೇಟಿನಲ್ಲಿ ಆರೋಗ್ಯಕ್ಕೆ ಹಾನಿಕರವಾದ ಬಣ್ಣ, ರಾಸಾಯನಿಕಗಳು, ನಿಕ್ಕಲ್ ಇತ್ಯಾದಿಗಳು ಅವಶ್ಯ ಪ್ರಮಾಣಕ್ಕೆ ಬದಲಿವೆಯಲ್ಲಿ ಮತ್ತು ನಿರ್ಬಂಧಿತ ರಾಸಾಯನಿಕಗಳು ಇತ್ಯಾದಿ ವಸ್ತುಗಳು ಇರುವುದು ಕಂಡು ಬಂದರೆ, ಈ ಚಾಕಲೇಟಿನ ಮಾರಾಟವನ್ನು ನಿಷೇಧಿಸಲಾಗುವುದು, ಹಾಗೂ ಪ್ರಿವೆನ್‌ಷನ್ ಆಫ್ ಫುಡ್ ಅಡಲ್ಟ್ರೇಷನ್ ಆಕ್ಟ್ ಪ್ರಕಾರ ಸಂಬಂಧಪಟ್ಟವರ ಮೇಲೆ ಮೊಕದ್ದಮೆ ಹಾಕಿಲು ಮಾಡಲಾಗುವುದು. ಈ ಚಾಕಲೇಟಿನ ಮಾರಾಟದ ಜೊತೆಗೆ ರೂಪಿಸಿಕೊಂಡಿರುವ ಲಾಟರಿ ಪದ್ಧತಿಯನ್ನು ತಕ್ಷಣ ನಿಷೇಧಿಸುವ ಸಲುವಾಗಿ ಕ್ರಮ ಕೈಗೊಳ್ಳಲು ಆರ್ಥಿಕ ಇಲಾಖೆಯನ್ನು ಕೋರಲಾಗುವುದು.

3. ಶ್ರೀರಂಗಪಟ್ಟಣವನ್ನು ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ.

ಶ್ರೀ ಎಂ. ಎಸ್. ಆತ್ಮಾನಂದ (ಮುಂಡ್ಯ):– ಮಾನ್ಯ ಅಧ್ಯಕ್ಷರೇ, ಶ್ರೀರಂಗಪಟ್ಟಣವು ಚಾರಿತ್ರಿಕ ಸ್ಥಳವಾಗಿದ್ದು ಮಹತ್ವದ ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿದೆ. ಇಲ್ಲಿ ಶ್ರೀರಂಗನಾಥ ಸ್ವಾಮಿ ದೇವಸ್ಥಾನ, ಟಿಪ್ಪು ಸುಲ್ತಾನ್ ಕೋಟೆ, ದರಿಯಾ ದೌಲತ್ ಇನ್ನು ಮುಂತಾದ ಪ್ರೇಕ್ಷಣೀಯ ಸ್ಥಳಗಳಿದ್ದು, ಈವರೆಗೂ ಯಾವುದೇ ಅಭಿವೃದ್ಧಿ ಕಾರ್ಯವನ್ನು ಪ್ರವಾಸಿಗರ ದೃಷ್ಟಿಯಿಂದ ಕೈಗೊಳ್ಳದೆ ಶ್ರೀರಂಗಪಟ್ಟಣವನ್ನು ಕಡೆಗಣಿಸಲಾಗಿದೆ. ಇದಲ್ಲದೆ, ದರಿಯಾ ದೌಲತ್‌ನಲ್ಲಿ ಧ್ವನಿ–ಬೆಳಕಿನ ವ್ಯವಸ್ಥೆಯನ್ನು ಏರ್ಪಡಿಸುವುದಾಗಿ ಹಿಂದಿನ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಆಶ್ವಾಸನೆ ನೀಡಿದ್ದರು. ಆದರೆ, ಈ ವ್ಯವಸ್ಥೆ ಇನ್ನೂ ಸಹ ಪ್ರಾರಂಭ ಮಾಡಿಲ್ಲ. ಪ್ರವಾಸೋದ್ಯಮ ಇಲಾಖೆ ಮತ್ತಿಯಿಂದ ಶ್ರೀರಂಗಪಟ್ಟಣವನ್ನು ಪ್ರವಾಸಿ ಕೇಂದ್ರವನ್ನಾಗಿ ಗುರ್ತಿಸಿ, ಅಭಿವೃದ್ಧಿಪಡಿಸಬೇಕೆಂದು ಹಾಗೂ ಧ್ವನಿ ಬೆಳಕಿನ ವ್ಯವಸ್ಥೆಯನ್ನು ದರಿಯಾ ದೌಲತ್‌ನಲ್ಲಿ ಮಾಡುವುದಲ್ಲದೆ ಕೆ.ಆರ್.ಎಸ್. ಮತ್ತು ಶ್ರೀರಂಗಪಟ್ಟಣ ಇವುಗಳ ಅಭಿವೃದ್ಧಿಗೆ ಒಂದು ಪ್ರತ್ಯೇಕ ಪ್ರಾಧಿಕಾರ ರಚಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ಶ್ರೀರಂಗಪಟ್ಟಣ ರಾಜ್ಯದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು. ಇದೊಂದು ಐತಿಹಾಸಿಕ ಸ್ಥಳ. ಇಲ್ಲಿರುವ ಪ್ರತಿಯೊಂದು ಸ್ಮಾರಕಗಳು ಇಲ್ಲಿನ ಹಿರಿಮೆಯನ್ನು ಸಾರುತ್ತಿವೆ. ಪ್ರಾಕೃತಿಕ ಸೊಬಗನ್ನುಳ್ಳ ಸುಂದರ ದ್ವೀಪ ಟಿಪ್ಪು ಸುಲ್ತಾನನ ರಾಜಧಾನಿ ಆಗಿದ್ದ ಶ್ರೀರಂಗಪಟ್ಟಣದಲ್ಲಿ ಆಕರ್ಷಕ ಸ್ಮಾರಕಗಳು, ದೇವಾಲಯಗಳು, ಮಸೀದಿಗಳು ಇವೆ.

ಶ್ರೀರಂಗಪಟ್ಟಣದಲ್ಲಿ 30 ಲಕ್ಷ ರೂ. ವೆಚ್ಚದ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯ (ಸೌಂಡ್ ಅಂಡ್ ಲೈಟ್ ಷೋ) ಯೋಜನೆ 1993-94ನೇ ಸಾಲಿನ ಕೇಂದ್ರ ಸರ್ಕಾರದ ನೆರವಿನ ಯೋಜನೆಯ ಆದ್ಯತಾ ಪಟ್ಟಿಯಲ್ಲಿ ಸೇರಿದೆ. ಧ್ವನಿ ಮತ್ತು ಬೆಳಕಿನ ವ್ಯವಸ್ಥೆಗಾಗಿ ಬರವಣಿಗೆ ಮತ್ತು ಸಂಗೀತವನ್ನು ಸಂಯೋಜಿಸಲು ಡಾ|| ಬಿ. ವಿ. ಕಾರಂತರನ್ನು ಕೋರಲಾಗಿದೆ.

ಪ್ರವಾಸಿಗರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಈಗಾಗಲೇ ಹೋಟೆಲ್ ಮಯೂರ ರಿವರ್ ವ್ಯೂ ಅನ್ನು ನಿರ್ವಹಿಸುತ್ತಿದೆ ಇಲಾಖೆ ಈ ನದಿ ತೀರದ ಕುಟೀರಗಳಿಗೆ ಹೆಚ್ಚುವರಿ ಕಾಟೇಜ್‌ಗಳನ್ನು ನಿರ್ಮಿಸಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸಿದೆ.

ಇದಲ್ಲದೆ ಕೇಂದ್ರದ ನೆರವಿನ ಯೋಜನೆಯಡಿಯಲ್ಲಿ ಶ್ರೀರಂಗನಾಥ ಸ್ವಾಮಿ ದೇವಾಲಯದ ಬಳಿ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಶೌಚಾಲಯವನ್ನು ಒಳಗೊಂಡ ಉಪಹಾರ ಗೃಹವನ್ನು 6.25 ಲಕ್ಷ ರೂ. ವೆಚ್ಚದಲ್ಲಿ 1990ರಲ್ಲಿ ನಿರ್ಮಿಸಲಾಯಿತು. ಪ್ರಸ್ತುತ ಈ ಸೌಲಭ್ಯವನ್ನು ನಿರ್ವಹಣೆಗಾಗಿ

ಕೆ.ಎಸ್.ಟಿ.ಡಿ.ಸಿ.ಗೆ ಹಸ್ತಾಂತರಿಸಲಾಗಿದೆ. ಇಲ್ಲಿ ಇಲಾಖೆ ಪ್ರವಾಸಿ ಮಾಹಿತಿ ಕೇಂದ್ರವನ್ನು ತೆರೆದಿದೆ. ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆಯು ಕೋಟೆಯ ಜೀರ್ಣೋದ್ಧಾರ ಕಾರ್ಯವನ್ನು ತೆಗೆದುಕೊಳ್ಳಲು ಯೋಚಿಸಿದೆ.

ಶ್ರೀರಂಗಪಟ್ಟಣದ ಪ್ರಾಮುಖ್ಯತೆಯನ್ನು ಮನಗಂಡು ಇಲಾಖೆ ಈ ಬಗ್ಗೆ ವಿಶೇಷ ವರ್ಣರಂಜಿತ ಮಡಿಕೆಯನ್ನು ಹೊರತಂದಿದೆ. ಇದಲ್ಲದೆ ಮಂಡ್ಯ ಜಿಲ್ಲೆಯ ಬಗ್ಗೆ ಇಲಾಖೆ ಹೊರತಂದಿರುವ ವರ್ಣರಂಜಿತ ಮಡಿಕೆಯಲ್ಲೂ ಸಹ ಶ್ರೀರಂಗಪಟ್ಟಣದ ಬಗ್ಗೆ ಪ್ರವಾಸಿ ಮಾಹಿತಿ ನೀಡಲಾಗಿದೆ.

ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಶ್ರೀರಂಗಪ್ಪಟಣವನ್ನು 'ಸಿ' ಗುಂಪಿನಡಿ ಸೇರಿಸಲಾಗಿದ್ದು, ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಶೇ. 25 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

ಶ್ರೀರಂಗಪಟ್ಟಣದ ದ್ವೀಪವನ್ನು ನೋಟಿಫೈಡ್ ಪ್ರದೇಶವೆಂದು ಘೋಷಿಸುವ ಪ್ರಶ್ನೆಯನ್ನು ಪರಿಶೀಲಿಸಲಾಗುವುದು.

4. ಉಡುಪಿ ತಾಲ್ಲೂಕು ಬ್ರಹ್ಮಾವರಮಂಡಲ ಪಂಚಾಯತಿ ಹಾಗೂ ವಾರಂಬಳ್ಳಿ ಮಂಡಲ ಪಂಚಾಯತಿಯನ್ನು ಸೇರಿಸಿ ಬ್ರಹ್ಮಾವರ ಪುರಸಭೆಯನ್ನಾಗಿ ಪರಿವರ್ತಿಸುವ ಬಗ್ಗೆ

ಶ್ರೀ ಪಿ. ಬಸವರಾಜ್:– (ಬ್ರಹ್ಮಾವರ) ಸನ್ಮಾನ್ಯ ಅಧ್ಯಕ್ಷರೆ, ಉಡುಪಿ ತಾಲ್ಲೂಕು ಬ್ರಹ್ಮಾವರ ಮಂಡಲ, ಪಂಚಾಯತ್ ವ್ಯವಸ್ಥೆಯು ಬರುವುದಕ್ಕಿಂತ ಮೊದಲು ಬ್ರಹ್ಮಾವರ ನಗರ ಪಂಚಾಯತಿ ಇತ್ತು. ಮಂಡಲ ಪಂಚಾಯತ್ ವ್ಯವಸ್ಥೆಯು ಬಂದ ಮೇಲೆ ಅದು ಬ್ರಹ್ಮಾವರ ಮಂಡಲ ಪಂಚಾಯತ್ ಮತ್ತು ವಾರಂಬಳ್ಳಿ ಮಂಡಲ ಪಂಚಾಯತ್ ಎಂದು ವಿಭಾಗಿಸಲ್ಪಟ್ಟಿತು. ಈಗ ಎರಡು ಮಂಡಲ ಪಂಚಾಯತ್‌ಗಳು ಕಾರ್ಯ ನಿರ್ವಹಿಸುತ್ತಿರುವುದರಿಂದ ಅಭಿವೃದ್ಧಿ ಕಾರ್ಯಗಳು ಅಷ್ಟು ಸಮರ್ಪಕವಾಗಿ ನಡೆಯಲು ಸಾಧ್ಯವಾಗುತ್ತಿಲ್ಲ. ಬ್ರಹ್ಮಾವರವು ಪುರಸಭೆಯನ್ನಾಗಿ ಪರಿವರ್ತಿಸಲು ನಿಯಮಾನುಸಾರವಾದ ಜನಸಂಖ್ಯೆಯನ್ನು ಕೂಡ ಹೊಂದಿದೆ. ಆದ್ದರಿಂದ ಈ ಪ್ರದೇಶದ ಪುರೋಭಿವೃದ್ಧಿಯನ್ನು ಸಾಧಿಸಲು ಮತ್ತು ಪುರಸಭೆಯ ಮೂಲಕ ಸಾರ್ವಜನಿಕ ಸೂಕ್ತ ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುವಂತೆ ಬ್ರಹ್ಮಾವರ ಮತ್ತು ವಾರಂಬಳ್ಳಿ ಮಂಡಲ ಪಂಚಾಯತ್‌ಗಳನ್ನು ಸೇರಿಸಿ ಬ್ರಹ್ಮಾವರ ಪುರಸಭೆ (ಮುನಿಸಿಪಾಲಿಟಿ)ಯನ್ನು ಮಾಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ವಿಜ್ಞಾಪಿಸಿಕೊಳ್ಳುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ :– (ಗಣಿ ಸಚಿವರು) (ನಗರಾಭಿವೃದ್ಧಿ ಸಚಿವರ ಪರವಾಗಿ)

1964ರ ಕರ್ನಾಟಕ ಪುರಸಭೆ ಕಾಯ್ದೆಯ ಅಡಿ ಜನಸಂಖ್ಯೆ 10,000ಕ್ಕಿಂತ ಹೆಚ್ಚಾಗಿದ್ದರೆ ಪುರಸಭೆ ಮಾಡಲು ಅವಕಾಶವಿದೆ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪ್ರಥಮವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಬಂದು ಆ ಇಲಾಖೆಯು ಬ್ರಹ್ಮಾವರ ಮತ್ತು ವಾರಂಬಳ್ಳಿ ಮಂಡಲಗಳನ್ನು ಸೇರಿಸಿ ಬ್ರಹ್ಮಾವರ ಪುರಸಭೆ ಮಾಡುವ ವಿಷಯದಲ್ಲಿ ಅಡಳಿತಾತ್ಮಕ ನಿರ್ಣಯ ತೆಗೆದುಕೊಳ್ಳಬೇಕಾಗುವುದು. ಅದುದರಿಂದ ಇನ್ನೂ ಈ ಬಗ್ಗೆ ಪ್ರಸ್ತಾವನೆಯು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಬಂದಿರುವುದಿಲ್ಲ. ಒಂದು ವೇಳೆ ಬಂದರೆ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.